ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಪಿಡಬ್ಲ್ಯೂ:6

ಎಸ್.ಸಿ. ಸಂಖ್ಯೆ: 548/2025 ಸಿಡಬ್ಲ್ಯೂ:7

ಸಾಕ್ಷಿದಾರರ ಹೆಸರು : ದಿನೇಶ್ ಯಡಿಯಾಳ

ತಂದೆ ಹೆಸರು : ಕೃಷ್ಣಮೂರ್ತಿ ಯಡಿಯಾಳ

ವಯಸ್ಸು : 57

ವೃತ್ತಿ : ಕೃಷಿ

ವಾಸ : ಹಳ್ಳಿಹೊಳೆ ಗ್ರಾಮ

<u>ದಿನಾಂಕ: 03-06-2026</u> ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

ನನಗೆ ಶೇಷಾಚಲ ಯಡಿಯಾಳ ರವರ ಪರಿಚಯ ಇದೆ. ಅವರ ಮನೆಗೆ ಈ ಹಿಂದೆ ಪೋಲೀಸರು ಬಂದ ವಿಷಯ ನನಗೆ ಗೊತ್ತಿಲ್ಲ. ಮತ್ತು ಅವರ ಮನೆಯಲ್ಲಿ ಯಾವುದೇ ಮಹಜರು ಮಾಡಿದ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಸದ್ರಿ ನಿಪಿ-2 ಮಹಜರಿನಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

<u>ಪಾಟೀ ಸವಾಲು:</u> ಸರ್ಕಾರಿ ಅಭಿಯೋಜಕರಿಂದ

ದಿನಾಂಕ:14-01-2005 ರಂದು ಶೇಷಾಚಲ ಯಡಿಯಾಳ ರವರ ಮನೆಗೆ ಆರೋಪಿತರಾದ ಮಹೇಶ, ಪ್ರದೀಪ, ಸರೋಜಾ, ವಿಕ್ರಮ್ ಗೌಡ, ದೇವೇಂದ್ರ, ವಸಂತ,

ಬಿ.ಜಿ. ಕೃಷ್ಣಮೂರ್ತಿ, ನೀಲಗುಳಿ ಪದ್ಮನಾಭ ರವರು ಬಂದು ಶೇಷಾಚಲ ಯಡಿಯಾಳ ರವರಿಗೆ ಜೀವ ಬೆದರಿಕೆ ಹಾಕಿದ ಹಿನ್ನಲೆಯಲ್ಲಿ ಚಾಸಾ.1 ರವರು ದೂರು ನೀಡಿದ್ದು ಆ ಬಗ್ಗೆ ಪಂಚನಾಮೆಗಾಗಿ ಪೋಲೀಸರು ದಿನಾಂಕ:15-01-2005 ರಂದು ಘಟನಾ ಸ್ಥಳವಾದ ಹಳ್ಳಿಹೊಳೆ ಗ್ರಾಮದಲ್ಲಿರುವ ಎಡಗೇರಿಯ ಫಿರ್ಯಾದಿದಾರರ ಮನೆಯ ಅಂಗಳದ ಘಟನಾ ಸ್ಥಳಕ್ಕೆ ಪಂಚನಾಮೆಗಾಗಿ ಬಂದಿದ್ದು ಘಟನಾ ಸ್ಥಳವನ್ನು ಫಿರ್ಯಾದಿದಾರರು ಪೋಲೀಸರಿಗೆ ತೋರಿಸಿದ್ದು ನನ್ನ ಹಾಗೂ ಇನ್ನೊಬ್ಬ ಪಂಚರಾದ ಉಲ್ಲಾಸ್ ಕನ್ನಂತ ರವರ ಸಮಕ್ಷಮ ಪೋಲೀಸರು ಘಟನಾ ಸ್ಥಳವನ್ನು ಪರಿಶೀಲಿಸಿ ಘಟನಾ ಸ್ಥಳದ ಪಂಚನಾಮೆಯನ್ನು 14.00 ಗಂಟೆಯಿಂದ 15.00 ಗಂಟೆ ಅವಧಿಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿ ಅಲ್ಲಾ. ಸದ್ರಿ ಪಂಚನಾಮೆ ಸಮಯ ನಾನು ಘಟನಾ ಸ್ಥಳದಲ್ಲಿ ಹಾಜರಿದ್ದು ಓದಿ ನೋಡಿ ತಿಳಿದು ಸದ್ರಿ ಮಹಜರಿಗೆ ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿ ಅಲ್ಲಾ.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

<u>ಪಾಟೀ ಸವಾಲು:</u> <u>ಆರೋಪಿ ಪರ ಶ್ರೀ ಎಂ ಆರ್ ಕೆ ಟಿ ವಕೀಲರಿಂದ</u>

ನಿಪಿ.2 ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿ. ನಾನು ಸದ್ರಿ ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

<u>ಮರು ವಿಚಾರಣೆ:</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**